## <u>ಹೆಚ್ಚುವರಿ ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂಡಾಧಿಕಾರಿಗಳ ನ್ಯಾಯಾಲಯ, ಸಾಗರ</u>

ಸಿ.ಸಿ ನಂ. 1536/2024

ಸಾಕ್ಷಿದಾರರ ಹೆಸರು : ಟಿ ಡಿ ಸಾಗರಕರ್

ತಂದೆಯ/ಗಂಡನ ಹೆಸರು : ಕೆ ದುರ್ಗಪ್ಪ

ವಯಸ್ಸು : 61 ವರ್ಷ

ಉದ್ಯೋಗ : ನಿವೃತ್ತ ಪಿ ಎಸ್ ಐ

ವಾಸಃ : ಸಾಗರ

ಸಿ.ಡಬ್ಲ್ಯೂ- 19 ಪಿ.ಡಬ್ಲ್ಯೂ- 6

<u>ದಿನಾಂಕ 01.09.2025 ರಂದು ಸಾಕ್ಷಿಗೆ ಪ್ರಮಾಣ ಭೋಧಿಸಲಾಯಿತು.</u>

<u>ಮುಖ್ಯ ವಿಚಾರಣೆ:- ಸ.ಸ. ಅ ರವರಿಂದಃ</u>

ನಾನು ದಿನಾಂಕಃ 05.11.2019 ರಿಂದ ದಿಃ 28.02.2025 ರವರೆಗೆ ಸಾಗರದ ಪೇಟೆ ಠಾಣೆಯಲ್ಲಿ ಪಿ ಎಸ್‌ಐ ಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೆ.

ಈ ಕೇಸಿನ ಕಡತವನ್ನು ಚಾಸಾ-18 ರವರಿಂದ ಪಡೆದಿರುತ್ತೇನೆ. ದಿಃ 17.08.2021 ರಂದು ಬೆಳಗ್ಗೆಃ 11.45 ಗಂಟೆಗೆ ಚಾಸಡಾ-6 ರವರು ಬಂದು ನೀಡಿದ ಹೇಳಿಕೆಯ ಆಧಾರದ ಮೇಲೆ 304(ಎ) ಅಳವಡಿಸಲು ನ್ಯಾಯಾಲಯಕ್ಕೆ ಕೋರಿಕೊಂಡಿರುತ್ತೇನೆ. ಮುಂದಿನ ತನಿಖೆಗಾಗಿ ಚಾಸ-21 ಕಡತವನ್ನು ಹಸ್ತಾಂತರಿಸಿರುತ್ತೇನೆ.

ನ್ಯಾಯಾಲಯದ ಮುಂದಿರುವ ಪ್ರಥಮ ವರ್ತಮಾನ ವರದಿ ಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-15 ಎಂದು, ಸಾಕ್ಷಿಗೆ ನಿಪಿ-1 ಅನ್ನು ಸಾಕ್ಷಿ ನೇಡಿ ಗುರುತಿಸಿದ್ದು ಚಾಸಾ-6 ರವರು ನೀಡಿದಂತ ಹೇಳಿಕೆ ಎಂದು ಗುರುತಿಸಿರುತ್ತಾರೆ. ನಿಪಿ-1 ರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಪಿ- 1 (ಬಿ) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು :- ಆರೋಪಿ ಪರ ಶ್ರೀ. ಕೆ.ಎಲ್.ಬಿ ವಕೀಲರಿಂದಃ-</u>

ನಿಪಿ-14 ರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿ. ಚಾಸಾ-6

ರವರು ಅಪಘಾತದ ಪ್ರತ್ಯಕ್ಷ ಸಾಕ್ಷಿ ಅಲ್ಲ ಎಂದರೆ ಸರಿ. ನಿಪಿ-1 ಅನ್ನು ನಾನು ಸ್ವೀಕರಿಸಿದ್ದೇನೆ ಹೊರೆತು ನನಗೆ ಈ ಪ್ರಕರಣದ ಮಾಹಿತಿ ಇರುವುದಿಲ್ಲ ಎಂದರೆ ಸರಿ. ಚಾಸಾ-6 ರವರು ನನಗೆ ನಿಪಿ-1 ರಂತೆ ದೂರನ್ನು ನೀಡಿದ್ದಾಗಲೀ, ನಾನು ಕಡತಕ್ಕೆ ಅಳವಡಿಸಿದ್ದಾಗಲೀ ಸುಳ್ಳು ಎಂದರೆ ಸರಿಯಲ್ಲ. ಚಾಸಾ-1 ರವರ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿ. ಕಲಂ 304(ಎ) ಅಳವಡಿಸುವ ಉದ್ದೇಶದಿಂದ ಈ ಪ್ರಥಮ ವರ್ತಮಾನ ವರದಿ ತಯಾರಿಸಿರುತ್ತೇವೆ ಎಂದರೆ ಸರಿ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

ಹೆಚ್ಚುವರಿ ಹಿರಿಯ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಸಾಗರ.